ಅಸಲು ದಾವಾ ನಂ.175/2017
ಪಿ ಡಬ್ಲು -2

ದಿನಾಂಕಃ 01–08–2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ– ವಾದಿ ಪರ ಶ್ರೀ . ಎಸ್ ಡಿ ಎಮ್ ವಕೀಲರಿಂದ .**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಸಾಕ್ಷಿ ಈ ಪ್ರಕರಣದ ಕಡತದಿಂದ ತೋರಿಸಲಾದ ದಾಖಲೆ ನಿಪಿ–1 ನ್ನು ಗುರುತಿಸುತ್ತಾರೆ. ಸಾಕ್ಷಿ ವಾದಿಯ ಮತ್ತು ಪ್ರತಿವಾದಿಯರ ಸಹಿಗಳನ್ನು ಗುರುತಿಸುತ್ತಾರೆ. ಅವುಗಳನ್ನು ಈಗಾಗಲೇ ನಿಪಿ–1(ಎ) ರಿಂದ ನಿಪಿ–1(ಸಿ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನಿಪಿ–1 ರ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸುತ್ತಿದ್ದು ಅದನ್ನು ನಿಪಿ–1(ಡಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ನಿಪಿ–1 ರ ಮೇಲೆ ಇರುವ 1 ನೇ ಸಾಕ್ಷಿದಾರರಾದ ಸಂಕನಗೌಡ ದ್ಯಾಮನಗೌಡ್ರ, 3 ನೇ ಸಾಕ್ಷಿದಾರರಾದ ಬಸವರಾಜ ಹೊಸಮನಿ, 4 ನೇ ಸಾಕ್ಷಿದಾರರಾದ ಬಲವಂತಪ್ಪ ಬಸವನಾಯಕರ, 5 ನೇ ಸಾಕ್ಷಿದಾರರಾದ ಬಸನಗೌಡ ದ್ಯಾಮನಗೌಡ್ರ ಇವರ ಸಹಿಗಳನ್ನು ಗುರುತಿಸುತ್ತಿದ್ದು ಅವರು ನನ್ನ ಸಮಕ್ಷಮ ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ಸಹಿಗಳನ್ನು ರುಜುವಾತಿನ ಭಾರದೊಂದಿಗೆ ನಿಪಿ–1(ಇ) ರಿಂದ ನಿಪಿ–1(ಹೆಚ್) ಎಂದು ಗುರುತಿಸಲಾಯಿತು. ಸಂಕನಗೌಡ ದ್ಯಾಮನಗೌಡ್ರ ಹಾಗೂ ಬಸವರಾಜ ಹೊಸಮನಿ ಇವರು ಜೀವಿತ ಇರುವುದಿಲ್ಲ.

ಸಾಕ್ಷಿ ಈ ಪ್ರಕರಣದ ಕಡತದಿಂದ ತೋರಿಸಲಾದ ದಾಖಲೆ ನಿಪಿ–2 ಭರಪಾಯಿ ಪತ್ರವನ್ನು ಗುರುತಿಸುತ್ತಾರೆ. ಸಾಕ್ಷಿ ವಾದಿಯ ಮತ್ತು ಪ್ರತಿವಾದಿಯರ ಸಹಿಗಳನ್ನು ಗುರುತಿಸುತ್ತಾರೆ. ಅವುಗಳನ್ನು ಈಗಾಗಲೇ ನಿಪಿ–2(ಎ) ರಿಂದ ನಿಪಿ–2(ಸಿ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನಿಪಿ–2 ರ ಮೇಲೆ ಇರುವ ತಮ್ಮ ಸಹಿಯನ್ನು

ಗುರುತಿಸುತ್ತಿದ್ದು ಅದನ್ನು ನಿಪಿ–2(ಡಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ನಿಪಿ–2 ರ ಮೇಲೆ ಇರುವ 3 ನೇ ಸಾಕ್ಷಿದಾರರಾದ ಬಸವರಾಜ ಹೊಸಮನಿ ಇವರ ಸಹಿಯನ್ನು ಗುರುತಿಸುತ್ತಾರೆ ಅದನ್ನು ನಿಪಿ–2(ಇ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಗೆ ನಿಪಿ–2 ರ ಮೇಲೆ ಇರುವ ಸಹಿಯನ್ನು ಬರಿಗಣ್ಣಿನಿಂದ ಗುರುತಿಸಲು ಆಗುತ್ತಿಲ್ಲ. ಕನ್ನಡಕ ಸಹಾಯ ಬೇಕು ಎಂದು ನುಡಿದಿರುತ್ತಾರೆ. ಆದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).